Wishing you a Joyous
IFTAR
with happiness, health & success always
Corporation Bank

ಮಂಗಳೂರು: ಕಾರ್ಪೊರೇಶನ್ ಬ್ಯಾಂಕ್ ಮಂಗಳವಾರ ಏರ್ಪಡಿಸಿದ ಇಫ್ತಾರ್ ಸೌಹಾರ್ದ ಕೂಟದಲ್ಲಿ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಬಿಬಾಸ್ ಕುಮಾರ್ ಶ್ರೀವಾತ್ಸವ ಅವರು ಶುಭಾಶಂಸನಗೈದರು. ಮಹಾಪ್ರಬಂಧಕ ಸಿ.ಜಿ. ಪಿಂಟೋ, ಉಪಮಹಾಪ್ರಬಂಧಕ ಡಿ.ಎಂ. ಮುಜುಮ್ದಾರ್, ಇಂಡಿಯಾನಾ ಹಾಸ್ಪಿಟಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ| ಯೂಸುಫ್ ಕುಂಬ್ಳೆ ಉಪಸ್ಥಿತರಿದ್ದರು.

ಆ. 11: ಕುಡುಪು ನಾಗರ ಪಂಚಮಿ

ಕುಡುಪು, ಆ. 7: ದಕ್ಷಿಣ ಭಾರತದ ಪ್ರಸಿದ್ಧ ನಾಗಾರಾಧಾನ ಕ್ಷೇತ್ರ ಕುಡುಪು ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಆ. 11ರಂದು ಸಂಭ್ರಮದ ನಾಗರಪಂಚಮಿ ಆಚರಿಸಲಾಗುವುದು.

ಪೂರ್ವಾಹ್ನ 5.30ಕ್ಕೆ ನಾಗಬನದಲ್ಲಿ ಸುಮಾರು 1,000ಕ್ಕೂ ಮಿಕ್ಕಿ ನಾಗಶಿಲಾ ಬಿಂಬಗಳಿಗೆ ಸೀಯಾಳಾಭಿಷೇಕ, ಪಂಚಾಮೃತ ಅಭಿಷೇಕ, ನಾಗತಂಬಿಲ ಸೇವೆಯೊಂದಿಗೆ ಮಹಾಪೂಜೆ ಜರಗಲಿದೆ.

ಪ್ರಧಾನ ಶ್ರೀ ಅನಂತಪದ್ಮನಾಭ ದೇವರಿಗೆ ಪೂರ್ವಾಹ್ನ ನವಕ ಕಲಶಾಭಿಷೇಕ, ಸೀಯಾಳಾಭಿಷೇಕ, ಪಂಚಾಮೃತ ಅಭಿಷೇಕ, ಅಷ್ಟೋತ್ತರ ಅರ್ಚನೆ, ಸಹಸ್ರನಾಮ ಅರ್ಚನೆ ಸೇವೆಯೊಂದಿಗೆ ಮಧ್ಯಾಹ್ನ ನಾಗರ ಪಂಚಮಿಯ ವಿಶೇಷ ಮಹಾಪೂಜೆ, ಬಳಿಕ ಅನ್ನಸಂತರ್ಪಣೆ ಜರಗಲಿದೆ.

ರೈಲ್ವೇ: ಒಂದು ಪಾಳಿ ಕೆಲಸ

ಮಂಗಳೂರು, ಆ. 7: ರಂಜಾನ್ ಹಬ್ಬದ ಪ್ರಯುಕ್ತ, ಆ. 9 ಶುಕ್ರವಾರ ದಕ್ಷಿಣ ರೈಲ್ವೇಯ ಕಂಪ್ಯೂಟರೀಕೃತ ಪ್ರಯಾಣಿಕರ ರಿಸರ್ವೇಶನ್ ಕೇಂದ್ರ ಕೇವಲ ಒಂದು ಪಾಳಿ (8 ರಿಂದ 14 ಗಂಟೆವರೆಗೆ) ಮಾತ್ರ ಕೆಲಸ ನಿರ್ವಹಿಸುತ್ತದೆ ಎಂದು ಪಾಲಕ್ಕಾಡ್ ವಿಭಾಗದ ಪ್ರಕಟನೆ ತಿಳಿಸಿದೆ.

ಮಂಗಳೂರು: ಕರ್ನಾಟಕ ಬ್ಯಾಂಕಿನ ಬೆಂಗಳೂರು – ಚಿಕ್ಕಪೇಟೆ ಶಾಖೆಯ ಸ್ಥಳಾಂತರ ಸಮಾರಂಭವನ್ನು ಬೆಂಗಳೂರಿನ ಉಡುಪಿ ಶ್ರೀಕೃಷ್ಣಭವನದ ಪಾಲುದಾರ ಸುಬ್ರಹ್ಮಣ್ಯ ಹೊಳ್ಳ ಎಸ್. ಉದ್ಘಾಟಿಸಿದರು. ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಪಿ. ರಘುರಾಮ, ಪಿ. ಸುಂದರ ರಾವ್, ಮಾಜಿ ನಿರ್ದೇಶಕರಾದ ಐ. ಜಗದೀಶ್ ರಾವ್, ಎಸ್.ಆರ್. ಹೆಗ್ಡೆ, ವ್ಯವಸ್ಥಾಪಕ ನಿರ್ದೇಶಕ ಪಿ. ಜಯರಾಮ್ ಭಟ್, ಮಹಾ ಪ್ರಬಂಧಕ ಎಂ.ವಿ.ಸಿ.ಎಸ್. ಕಾರಂತ, ಬ್ಯಾಂಕಿನ ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪ ಮಹಾಪ್ರಬಂಧಕ ರಾಘವೇಂದ್ರ ಭಟ್ ಎಂ., ಸಹಾಯಕ ಮಹಾಪ್ರಬಂಧಕ ನಂದಕಿಶೋರ್ ವಿ. ಬಲ್ಲಾಳ್, ಚಿಕ್ಕಪೇಟೆ ಶಾಖೆಯ ಹಿರಿಯ ಪ್ರಬಂಧಕ ವೇಣುಗೋಪಾಲನ್ ಎ.ವಿ. ಮೊದಲಾದವರು ಉಪಸ್ಥಿತರಿದ್ದರು.

ಆ. 10: ಲಯನ್ಸ್ ಜಿಲ್ಲಾ ಸಂಪುಟ ಪದಗ್ರಹಣ

ಮಂಗಳೂರು, ಆ. 7: ಲಯನ್ಸ್ ಸಂಸ್ಥೆಯ ಜಿಲ್ಲಾ ಸಂಪುಟ ಪದಗ್ರಹಣ ಸಮಾರಂಭ ಆ. 10ರಂದು ಸಂಜೆ 3.30ಕ್ಕೆ ನಗರದ ಟಿಎಂಎ ಪೈ ಕನ್ವೆನ್ಶನ್ ಸೆಂಟರ್‌ನಲ್ಲಿ ನಡೆಯಲಿದೆ ಎಂದು ಲಯನ್ಸ್ ಜಿಲ್ಲಾ ಗವರ್ನರ್ ಕೆ.ಸಿ. ಪ್ರಭು ತಿಳಿಸಿದ್ದಾರೆ.

ಬುಧವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಯನ್ಸ್ 2012 – 14ನೇ ಸಾಲಿನ ಅಂತಾರಾಷ್ಟ್ರೀಯ ನಿರ್ದೇಶಕ ಆರ್. ಸುನಿಲ್ ಕುಮಾರ್, ಜಸ್ಟಿಸ್ ಎನ್. ಸಂತೋಷ್ ಹೆಗ್ಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಆ. 9ರಿಂದ ವಿವಿಧ ರೀತಿಯ ಸರ್ವಿಸ್ ಪ್ರಾಜೆಕ್ಟ್‌ಗಳು ನಡೆಯಲಿದ್ದು ಅದರ ಉದ್ಘಾಟನಾ ಸಮಾರಂಭ ಮಲ್ಲಿಕಟ್ಟೆಯ ಲಯನ್ಸ್ ಸೇವಾ ಮಂದಿರದಲ್ಲಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಲಯನ್ಸ್ ವತಿಯಿಂದ ವಿವಿಧ ರೀತಿಯ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಲಯನ್ಸ್ ಸಾರ್ವಜನಿಕ ಸಂಪರ್ಕಾಧಿಕಾರಿ ಕುಡ್ಪಿ ಅರವಿಂದ ಶೆಣೈ, ಸಹ ಸಾರ್ವಜನಿಕ ಸಂಪರ್ಕಾಧಿಕಾರಿ ತಾರಾನಾಥ ಶೆಟ್ಟಿ ಬೋಳಾರ, ಜಿಲ್ಲಾ ಖಜಾಂಚಿ ಎ. ಚಂದ್ರಹಾಸ ಶೆಟ್ಟಿ, ಲಯನೆಸ್ ಜಿಲ್ಲಾ ಸಂಯೋಜಕಿ ಆಶಾ ಚಂದ್ರಮೋಹನ್ ಉಪಸ್ಥಿತರಿದ್ದರು.

ಕರ್ನಾಟಕ ಬ್ಯಾಂಕ್

ನಿರ್ದೇಶಕರಾಗಿ ಉಷಾ ಗಣೇಶ್ ನೇಮಕ

ಮಂಗಳೂರು, ಆ. 7: ಕರ್ನಾಟಕ ಬ್ಯಾಂಕಿನ ಪ್ರಪ್ರಥಮ ಮಹಿಳಾ ನಿರ್ದೇಶಕರಾಗಿ ಉಷಾ ಗಣೇಶ್ ಅವರನ್ನು ಬ್ಯಾಂಕಿನ ಆಡಳಿತ ಮಂಡಳಿಯು ನೇಮಿಸಿದೆ.

1973ರಿಂದ 2008ರ ವರೆಗೆ ಕರ್ನಾಟಕ ಶ್ರೇಣಿಯಲ್ಲಿ ಐಎಎಸ್ ಅಧಿಕಾರಿಯಾಗಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ ಅವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಹೈಕೋರ್ಟ್ ನ್ಯಾಯಾಧೀಶರ ತತ್ಸಮಾನ ಹುದ್ದೆ) ಸದಸ್ಯರಾಗಿ 2008ರಿಂದ 2013ರ ವರೆಗೆ ಸೇವೆ ಸಲ್ಲಿಸಿದ್ದರು. ಅವರು ಕಾನೂನು, ವಿತ್ತ, ಕೃಷಿ, ಗ್ರಾಮೀಣ ಆರ್ಥಿಕತೆ, ಸಹಕಾರ, ಸಣ್ಣ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಅನುಭವ ಹೊಂದಿದ್ದಾರೆ.

ಪುತ್ತೂರು ದೇಗುಲ ಬ್ರಹ್ಮಕಲಶೋತ್ಸವ

1.04 ಕೋ.ರೂ. ಉಳಿಕೆ

ಪುತ್ತೂರು(ಕುಂಬ್ರ), ಆ.7: ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಮತ್ತು ಜೀರ್ಣೋದ್ಧಾರ ಸಂದರ್ಭ ಸಂಗ್ರಹವಾದ ಮೊತ್ತದಲ್ಲಿ ಒಟ್ಟು 1.04 ಕೋ.ರೂ. ಉಳಿಕೆಯಾಗಿದೆ.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನನ್ಯ ಅಚ್ಯುತ ಮೂಡಿತ್ತಾಯ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

ಬ್ರಹ್ಮಕಲಶೋತ್ಸವ ಕಾರ್ಯಕ್ಕೆ ಒಟ್ಟು 3.81 ಕೋ.ರೂ. ಜಮೆಯಾಗಿದ್ದು, 2.77 ಕೋ.ರೂ. ಖರ್ಚು ಆಗಿದೆ. ಜೀರ್ಣೋದ್ಧಾರ ಕಾರ್ಯಕ್ಕೆ 11.05 ಕೋ.ರೂ. ಜಮೆಯಾಗಿದ್ದು, 11.7 ಕೋ.ರೂ. ಖರ್ಚು ಆಗಿರುತ್ತದೆ.

ಒಟ್ಟು 1.04 ಕೋ.ರೂ. ಉಳಿಕೆಯಾಗಿದ್ದು, ಈ ಹಣವನ್ನು ದೇವಸ್ಥಾನದಲ್ಲಿ ತುರ್ತಾಗಿ ನಡೆಯಬೇಕಿದ್ದ ಕಾಮಗಾರಿಗಳಿಗೆ ಬಳಕೆ ಮಾಡಲಾಗುವುದು. ಈ ವಿಚಾರದ ಕುರಿತು ಸರಕಾರವನ್ನು ಕೇಳಿಕೊಳ್ಳಲಾಗುವುದು ಎಂದು ಹೇಳಿದರು.

ದೇವಸ್ಥಾನಕ್ಕೆ ಅಡುಗೆ ಶಾಲೆ, ಭೋಜನಶಾಲೆ ಮತ್ತು ಆಡಳಿತ ಕಚೇರಿ ತುರ್ತಾಗಿ ನಿರ್ಮಾಣವಾಗಬೇಕಿದೆ. ದೇವಸ್ಥಾನಕ್ಕೆ ಭದ್ರತಾ ಕೊಠಡಿಯೊಂದರ ಆವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕಾಮಗಾರಿಗಳನ್ನು ನಡೆಸಲು ವ್ಯವಸ್ಥಾಪನಾ ಸಮಿತಿ ಸಿದ್ಧತೆ ಮಾಡಿದೆ ಎಂದರು.

ದೇವರಿಗೆ ಕ್ಷೀರಾಭಿಷೇಕ

ದೇವಸ್ಥಾನದಲ್ಲಿ ಬ್ರಹ್ಮಲಶೋತ್ಸವದ ಬಳಿಕ ಶ್ರೀ ದೇವರಿಗೆ ಕ್ಷೀರಾಭಿಷೇಕ ಮಾಡಲಾಗುತ್ತಿದ್ದು, ಇದಕ್ಕೆ ಈಗ ಹಾಲು ತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗೋಶಾಲೆಯನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ದೇವಸ್ಥಾನಕ್ಕೆ ಹತ್ತಿರದಲ್ಲೇ ಹೊಸ ರಂಗಮಂದಿರವನ್ನು ನಿರ್ಮಿಸಿ ಅದರಲ್ಲಿ ನಿತ್ಯವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಕುರಿತು ಯೋಜನೆ ರೂಪಿಸಲಾಗಿದೆ.

ಕೆರೆಯ ಹೂಳೆತ್ತುವಿಕೆ

ಮುಂದಿನ ಜನವರಿ ಅಥವಾ ಫೆಬ್ರವರಿ ತಿಂಗಳಿನಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಮುತ್ತು ಬೆಳೆದ ಶ್ರೀ ದೇವಳದ ಕೆರೆಯ ಹೂಳೆ ತ್ತುವ ಕಾಮಗಾರಿಯನ್ನು ನಡೆಸಲಾಗುವುದು. ಮುಂದಿನ 2016 ಎ. 25ರ ವರೆಗೆ ಈಗಿರುವ ವ್ಯವಸ್ಥಾಪನಾ ಸಮಿತಿ ಅಸ್ತಿತ್ವದಲ್ಲಿರುತ್ತದೆ ಎಂದು ಹೇಳಿದರು. ದೇವಸ್ಥಾನದ ಬಳಿ ಇರುವ ಶ್ರೀ ದೇವರ ಕಟ್ಟೆಗಳನ್ನು ಸಾರ್ವಜನಿಕರ ಮತ್ತು ಭಕ್ತರ ನೆರವಿನಿಂದ ನವೀಕರಿಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀದೇವಳದ ಕಾರ್ಯ ನಿರ್ವಹಣಾಧಿಕಾರಿ ಸಿ.ಯು. ಪೂವಪ್ಪ, ಲೆಕ್ಕಪರಿಶೋಧಕ ಗಣೇಶ್ ಜೋಶಿ, ಪುನರ್ ನಿರ್ಮಾಣ ಸಮಿತಿಯ ಪ್ರಧಾನ ಕಾರ್ಯದರ್ಶಿ ಚನಿಲ ತಿಮ್ಮಪ್ಪ ಶೆಟ್ಟಿ, ಕರಸೇವಕರ ಉಸ್ತುವಾರಿ ಕಾರ್ಯದರ್ಶಿ ರಾಜೇಶ್ ಬನ್ನೂರು ಉಪಸ್ಥಿತರಿದ್ದರು.

ಬನ್ನಂಜೆ ಗೋವಿಂದಾಚಾರ್ಯರಿಗೆ ಪ್ರಜ್ಞಾದೀಪ್ತಿ ಪ್ರಶಸ್ತಿ

ಕಟೀಲು, ಆ. 7: ಬಹುಶ್ರುತ ವಿದ್ವಾಂಸ, ಅನನ್ಯ ಕಲಾಸಾಧಕ, ವಿದ್ವಾನ್ ದ್ವಿವೇದಿ ಕೊರ್ಗಿ ವೆಂಕಟೇಶ್ವರ ಉಪಾಧ್ಯಾಯ ಪ್ರತಿಷ್ಠಾನದ ಆಶ್ರಯದಲ್ಲಿ ಕೊಡಮಾಡುವ ಪ್ರಜ್ಞಾದೀಪ್ತಿ ಪ್ರಶಸ್ತಿಯನ್ನು ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ ಅವರಿಗೆ ನೀಡಿ ಗೌರವಿಸಲಾಗುವುದು.

ಆ. 10ರಂದು ಸಂಜೆ ಕಟೀಲು ದೇವಸ್ಥಾನದ ಸರಸ್ವತೀ ಸದನದಲ್ಲಿ ನಡೆಯಲಿರುವ ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಣಿಪಾಲದ ಡಾ| ಭಾಸ್ಕರಾನಂದ ಕುಮಾರ್ ಅಧ್ಯಕ್ಷತೆಯಲ್ಲಿ ಖ್ಯಾತ ಕಲಾವಿಮರ್ಶಕ ಎ. ಈಶ್ವರಯ್ಯ ಅಭಿನಂದಾ ಭಾಷಣಗೈಯುವರು ಎಂದು ಪ್ರಕಟನೆ ತಿಳಿಸಿದೆ.

ಹಿಂದಿ ಶಿಕ್ಷಕ ಕೋರ್ಸ್ ಪರೀಕ್ಷೆ

ಉಡುಪಿ / ಮಂಗಳೂರು, ಆ. 7: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಮೇಯಲ್ಲಿ ನಡೆಯಬೇಕಿದ್ದ 'ಹಿಂದೀ ಶಿಕ್ಷಕ್ ಕೋರ್ಸ್' ಪರೀಕ್ಷೆ ಆ. 26ರಿಂದ ಪ್ರಾರಂಭವಾಗಲಿದ್ದು, ಕಾಲೇಜಿನ ವಿವಿಧ ಜಿಲ್ಲೆಗಳ ಪ್ರಶಿಕ್ಷಣಾರ್ಥಿಗಳು ಪ್ರವೇಶ ಪತ್ರಕ್ಕಾಗಿ ಪ್ರಾಂಶುಪಾಲರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ 08232 – 226667/ 9448268114 ಸಂಪರ್ಕಿಸ ಬಹುದು ಎಂದು ಪ್ರಾಂಶುಪಾಲರು ತಿಳಿಸಿರುತ್ತಾರೆ.

ಆ. 24: ಮಂಗಳೂರಿಗೆ

ಚೇತನ್ ಭಗತ್

ಮಂಗಳೂರು, ಆ. 7: ಮಾನವ ಸಂಪದ ಕ್ಷೇತ್ರದ ತಜ್ಞ, ಸಾಹಿತಿ, ಅಂಕಣಕಾರ, ವಾಗ್ಮಿ ಚೇತನ್ ಭಗತ್ ಅವರ ಕಾರ್ಯಕ್ರಮವನ್ನು ಮಣಿಪಾಲ್ ಏಸ್ ಸಂಸ್ಥೆಯು ಆಗಸ್ಟ್ 24ರಂದು ಅಪರಾಹ್ನ 2.30ಕ್ಕೆ ನಗರದ ಡಾ| ಟಿಎಂಎ ಪೈ ಸಭಾಂಗಣದಲ್ಲಿ ಏರ್ಪಡಿಸಿದೆ.

ಭಗತ್ ಅವರು ತ್ರೀ ಈಡಿಯಟ್ಸ್, ಕ್ಯಾ ಪೋಚೆ, 2 ಸ್ಟೇಟ್ಸ್ ಚಿತ್ರಗಳ ಸಾಹಿತಿ. ಅವರ ಕಾರ್ಯಕ್ರಮ ಕಾರ್ಪೊರೇಟರ್ಸ್, ಮೆನೇಜ್‌ಮೆಂಟ್ ವಿದ್ಯಾರ್ಥಿಗಳು, ಎಂಜಿನಿಯರಿಂಗ್ ವಿದ್ಯಾರ್ಥಿಗಳು, ಉಪನ್ಯಾಸಕರು, ವೃತ್ತಿಪರರು, ಕಿರು ಉದ್ಯಮಿಗಳಿಗೆ ಸಹಕಾರಿ ಎಂದು ಸಂಘಟಕರು ತಿಳಿಸಿದ್ದಾರೆ. ಈ ಕಾರ್ಯಕ್ರಮವನ್ನು ಕಾರ್ಪೊರೇಶನ್ ಬ್ಯಾಂಕ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಉದಯವಾಣಿ, ರೇಡಿಯೋ ಮಿರ್ಚಿ ಪ್ರವರ್ತಿಸಿವೆ. ಪೂರಕ ಮಾಹಿತಿ: www.manipalace.com <http://www.manipalace.com>

ಮಣಿಪಾಲ್ ವಿ.ವಿ ಇನ್‌ಕ್ಯುಬೇಟರ್‌ನಿಂದ ಉದ್ಯಮ ಉತ್ತೇಜನ

ಉದ್ಯಮ ಆರಂಭಿಸುವವರಿಗೆ ಸೌಲಭ್ಯ ವ್ಯವಸ್ಥೆ

ಉಡುಪಿ, ಆ. 7: ಮಣಿಪಾಲ್ ಯುನಿವರ್ಸಿಟಿ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯೂಬೇಟರ್(ಎಂಯುಟಿಬಿಐ) ಹಾಗೂ ಉಡುಪಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ(ಯುಸಿಸಿಐ) ಸಹಭಾಗಿತ್ವದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಸಲುವಾಗಿ ಉದ್ಯಮ ಆರಂಭಿಸುವ ಉಡುಪಿ ಮತ್ತು ದ.ಕ ಜಿಲ್ಲೆಯವರಿಗೆ ಮೂಲಸೌಕರ್ಯ ಹಾಗೂ ಮೂಲನಿಧಿ ಒದಗಿಸುವ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಎಂಯುಟಿಬಿಐನ ಸಿಇಒ ಡಾ| ಮನೋಹರ ಪೈ ಎಂ.ಎಂ ಅವರು ತಿಳಿಸಿದ್ದಾರೆ.

ಎಂಯುಟಿಬಿಐ ಎಂಬುದು ಭಾರತ ಸರಕಾರದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮ ಅಭಿವೃದ್ಧಿ ಮಂಡಳಿ(ಎನ್‌ಎಸ್‌ಟಿಇಡಿಬಿ) ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿಧಿ ಪಡೆದು ಅದನ್ನು ಉದ್ಯಮ ಸ್ಥಾಪನೆ, ಉತ್ತೇಜನಕ್ಕೆ ಪೂರೈಸುವ ತಂತ್ರಜ್ಞಾನ ವ್ಯಾಪಾರ ಸಂಸ್ಥೆಯಾಗಿದೆ. 2010ರಲ್ಲಿ ಆರಂಭಗೊಂಡಿರುವ ಈ ಸಂಸ್ಥೆಯಿಂದ ಇದುವರೆಗೆ ಹಲವಾರು ಉದ್ದಿಮೆಗಳು ಉಪಯೋಗ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿವೆ. ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಮೂಲಧನ ಹಾಗೂ ಇತರ ಸಹಾಯವನ್ನು ಎಂಯುಟಿಬಿಐ ಮೂಲಕ ನೀಡಲಾಗುವುದು. ಇದು ಮಣಿಪಾಲ ವಿ.ವಿಯ ಸಾಮಾಜಿಕ ಸೇವಾ ಕಾರ್ಯಕ್ರಮವೂ ಆಗಿದೆ. ಆಸಕ್ತರು ಸೆ.10ರೊಳಗೆ ಅರ್ಜಿ ಸಲ್ಲಿಸಬೇಕು. ಕಚೇರಿ ಸ್ಥಳಾವಕಾಶ, ತಾಂತ್ರಿಕ ಸಹಾಯ, ಎಂಐಟಿಯಲ್ಲಿನ ಇತರ ಸೌಲಭ್ಯಗಳು, ಮಾರುಕಟ್ಟೆ ಸಮೀಕ್ಷೆ, ಹಣಕಾಸು ಮತ್ತು ಕಾನೂನು ಸೇವೆಗಳು, ಪೇಟೆಂಟ್ ಸೇವೆ ಮೊದಲಾದ ಸೌಕರ್ಯಗಳು ದೊರೆಯಲಿವೆ ಎಂದು ಅವರು ತಿಳಿಸಿದರು.

ಉದ್ಯಮವನ್ನು ಆರಂಭಿಸುವ ಯುವ ಉದ್ಯಮಶೀಲರಿಗೆ ಎಂಯುಟಿಬಿಐ ವರದಾನವಾಗಿದೆ. ಇದರಿಂದಾಗಿ ಉದ್ಯಮದ ಬಗ್ಗೆ ಮಾಹಿತಿಯ ಜತೆಗೆ ಹಣಕಾಸಿನ ನೆರವು ಹಾಗೂ ಇತರ ಸೌಲಭ್ಯಗಳು ಕೂಡ ದೊರೆಯುವುದರಿಂದ ಜಿಲ್ಲೆಯ ಉದ್ಯಮ ಕ್ಷೇತ್ರಕ್ಕೆ ಉತ್ತೇಜನ ದೊರೆಯುತ್ತದೆ ಎಂದು ಯುಸಿಸಿಐ ಅಧ್ಯಕ್ಷ ಪ್ರಸಾದ್ ರಾಜ್ ಕಾಂಚನ್ ಹೇಳಿದರು. ಎಂಐಟಿಯ ನಿರ್ದೇಶಕ ವಿನೋದ್ ಥಾಮಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕ್ಯೊನಾಡು: ದುರಸ್ತಿ ಸದ್ಯಕ್ಕೆ ಅಸಾಧ್ಯ



ಮಡಿಕೇರಿ, ಆ. 7: ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಕ್ಯೊನಾಡಿನ ರಸ್ತೆ ದುರಸ್ತಿ ತತ್‌ಕ್ಷಣಕ್ಕೆ ಅಸಾಧ್ಯವಾಗಿದೆ. ಮಳೆಗಾಲ ಮುಗಿದ ಕೂಡಲೇ ಕ್ಯೊನಾಡಿನಲ್ಲಿ ತಾತ್ಕಾಲಿಕ ರಸ್ತೆ ನಿರ್ಮಿಸಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸದಾಶಿವ ರೆಡ್ಡಿ ಪಾಟೀಲ್ ತಿಳಿಸಿದ್ದಾರೆ.

ಬುಧವಾರ ಕ್ಯೊನಾಡಿಗೆ ಭೇಟಿ ನೀಡಿದ ಅವರು ಕುಸಿದಿರುವ ರಸ್ತೆಯನ್ನು ಪರಿಶೀಲಿಸಿದರು. ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಗುರುವಾರ ತಜ್ಞರು ಸ್ಥಳಕ್ಕೆ ಭೇಟಿ ನೀಡಲಿದ್ದು, ರಸ್ತೆ ಕುಸಿತಕ್ಕೆ ಕಾರಣ ಕಂಡುಹಿಡಿಯಲಿದ್ದಾರೆ ಮತ್ತು ಸರ್ವೇ ಕಾರ್ಯ ನಡೆಸಿ ರಸ್ತೆ ದುರಸ್ತಿಯ ಯೋಜನೆ ರೂಪಿಸಲಿದ್ದಾರೆ ಎಂದರು.

ಜಿಲ್ಲಾಧಿಕಾರಿ ಡಾ| ಎಂ.ವಿ. ಪ್ರಸಾದ್, ಅಪರ ಜಿಲ್ಲಾಧಿಕಾರಿ ಜಿ. ಪ್ರಭು, ಲೋಕೋಪಯೋಗಿ ಇಲಾಖೆಯ ಎಂಜಿನಿಯರ್‌ಗಳಾದ ಅಶೋಕ್, ಕಾಳೇಗೌಡ, ವೆಂಕಟಾದ್ರಿ ಉಪಸ್ಥಿತರಿದ್ದರು.

ಸಿಂಕೋನದಲ್ಲಿ ಪ್ರತಿಭಟನೆ

ಬಿರುಕು ಬಿಟ್ಟ ಸಿಂಕೋನ ರಸ್ತೆಗೆ ಸಕಾಲದಲ್ಲಿ ಬಸ್ ಬಾರದೆ ಪರದಾಡಿದ ಪ್ರಯಾಣಿಕರು ಹಾಗೂ ನೂರಾರು ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ನಡೆಸಿದರು. ಹೆಚ್ಚುವರಿ ಬಸ್‌ಗಳು ಬಂದ ಅನಂತರ ಪ್ರತಿಭಟನಕಾರರು ಹಿಂದೆ ಸರಿದರು.

ಕ್ಯೊನಾಡು ರಸ್ತೆ ಮತ್ತಷ್ಟು ಕುಸಿತ

ಅಜ್ಜಾವರ, ಆ. 7: ಸುಳ್ಯ – ಮಡಿಕೇರಿ ರಾಜ್ಯ ಹೆದ್ದಾರಿಯ ಕ್ಯೊನಾಡಿನಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ಅಭಿವೃದ್ಧಿ ಪಡಿಸಲಾದ ರಸ್ತೆಯು ಸುಮಾರು ಒಂದು ಎಕರೆ ಪ್ರದೇಶದಲ್ಲಿ ಕುಸಿತಕ್ಕೊಳಗಾಗಿದ್ದು, ಕೆಳಗಡೆ ಹರಿಯುವ ನದಿಯ ತನಕ ಮಣ್ಣು ಬಿರುಕು ಬಿಟ್ಟಿದೆ.

ರಸ್ತೆ ಬಿರುಕು ಬಿಟ್ಟಲ್ಲಿ ನೀರು ಒಸರುತ್ತಿದ್ದು, ಮಣ್ಣು ಸಡಿಲಗೊಂಡಿರುವ ಕಾರಣ ಬಿರುಕಿನ ಪ್ರಮಾಣ ಮತ್ತು ಕುಸಿತದ ಪ್ರಮಾಣ ಹೆಚ್ಚಾಗುತ್ತಾ ಹೋಗಿದೆ ಎಂದು ಕೆಆರ್‌ಡಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿ ರಸ್ತೆಯನ್ನು ಮತ್ತೆ ನಿರ್ಮಿಸಲು ಕನಿಷ್ಠ 3 ತಿಂಗಳು ಬೇಕು. ಮಳೆ ನಿಲ್ಲದೆ ಯಾವುದೇ ಕಾಮಗಾರಿ ಕೈಗೊಂಡರೂ ರಸ್ತೆಯ ಬಿರುಕು ಇನ್ನಷ್ಟು ವಿಸ್ತಾರಗೊಳ್ಳುವ ಸಾಧ್ಯತೆಗಳಿವೆ ಎಂದು ಕೆಆರ್‌ಡಿಸಿಎಲ್ ತಂತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಹಳೆ ರಸ್ತೆಯಲ್ಲಿ ಲಘುವಾಹನ

ರಸ್ತೆ ಬಿರುಕು ಬಿಟ್ಟ ಸ್ಥಳದ ಪಕ್ಕದಲ್ಲಿರುವ ಹಳೆಯ ರಸ್ತೆಯಲ್ಲಿ ಎರಡು ಮೋರಿಗಳನ್ನು ಕೆಆರ್‌ಡಿಸಿಎಲ್ ವತಿಯಿಂದ ನಿರ್ಮಿಸಲಾಗಿದೆ. ಲಘು ವಾಹನಗಳಿಗೆ ಈ ರಸ್ತೆಯ ಮೂಲಕ ಮಡಿಕೇರಿ ಕಡೆಗೆ ತೆರಳಲು ಅನುಕೂಲ ಮಾಡಿಕೊಡಲಾಗಿದೆ. ಹಳೆ ರಸ್ತೆಯಲ್ಲಿ ಘನವಾಹನ ಓಡಾಟ ಸುರಕ್ಷಿತವಲ್ಲ ಎಂಬ ಸಲಹೆಯನ್ನು ತಂತ್ರಜ್ಞರು ಜಿಲ್ಲಾಡಳಿತಕ್ಕೆ ನೀಡಿದ್ದಾರೆ.

ಮೂಳೆ ತಪಾಸಣೆ

ಮಂಗಳೂರು: ಅತ್ತಾವರ ಕೆಎಂಸಿಯಲ್ಲಿ ಆ. 8ರ ಬೆಳಗ್ಗೆ 9.30ರಿಂದ ಮಧ್ಯಾಹ್ನ 1ರ ವರೆಗೆ ಮೂಳೆ ಸಾಂದ್ರತೆ ತಪಾಸಣೆ ನಡೆಯಲಿದೆ.

ನಿಡ್ಡೋಡಿ ಯೋಜನೆಗೆ ಸಂಪುಟ ಸಭೆಯಲ್ಲಿ ವಿರೋಧ

ನಾವೆಲ್ಲರೂ ಯೋಜನೆಯ ವಿರೋಧಿಗಳೇ

ಸಚಿವತ್ರಯರ ಸ್ಪಷ್ಟನೆ

ಕಾಪು, ಆ. 7: ನಿಡ್ಡೋಡಿ ಕುರಿತು ನಾವು ಮೌನ ವಹಿಸಿದ್ದೇವೆ ಎನ್ನುವುದು ಅಪ್ಪಟ ಸುಳ್ಳು, ಕರಾವಳಿಯ ನಾಲ್ವರು ಸಚಿವರೂ ಈ ಯೋಜನೆಯಿಂದಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿದ್ದೇವೆ. ನಾವೆಲ್ಲರೂ ಸ್ಥಾವರ ಸ್ಥಾಪನೆಯನ್ನು ವಿರೋಧಿಸುತ್ತೇವೆ ಎಂದು ಸಚಿವರಾದ ಅಭಯಚಂದ್ರ ಜೈನ್, ಬಿ. ರಮಾನಾಥ ರೈ ಮತ್ತು ವಿನಯ ಕುಮಾರ್ ಸೊರಕೆ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳಿಗೆ ಮನವರಿಕೆ: ಜೈನ್

ನಿಡ್ಡೋಡಿಯಲ್ಲಿ ಉಷ್ಣವಿದ್ಯುತ್ ಸ್ಥಾವರ ಸ್ಥಾಪನೆಗೆ ತೀವ್ರ ಜನವಿರೋಧ ಇರುವುದಾಗಿ ಈಗಾಗಲೇ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಲಾಗಿದ್ದು, ಮುಖ್ಯಮಂತ್ರಿಗಳಿಂದಲೂ ಸಕಾರಾತ್ಮಕವಾದ ಸ್ಪಂದನೆ ದೊರಕಿದೆ ಎಂದು ಯುವಜನ ಮತ್ತು ಮೀನುಗಾರಿಕಾ ಸಚಿವ, ಮೂಡಬಿದಿರೆ ಶಾಸಕ ಅಭಯಚಂದ್ರ ಜೈನ್ ಹೇಳಿದರು.

ಮಂಗಳವಾರ ಕಾಪು ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಡ್ಡೋಡಿ ಯೋಜನೆಯಿಂದ ಆಗಬಹುದಾದ ಸಾಧಕ – ಬಾಧಕಗಳ ಬಗ್ಗೆ ಅಧ್ಯಯನ ನಡೆಸುವಂತೆ ಈಗಾಗಲೇ ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ಮನವಿ ಮಾಡಲಾಗಿದೆ. ಯೋಜನೆಯಿಂದಾಗುವ ಲಾಭ ನಷ್ಟಗಳ ಕುರಿತಾಗಿ ಸಮಗ್ರವಾದ ಅಧ್ಯಯನ ನಡೆದು ಅನಂತರದಲ್ಲಿ ಈ ಕುರಿತು ಯೋಜನೆಯನ್ನು ಅನುಷ್ಠಾನಗೊಳಿಸಬೇಕೇ? ಬೇಡವೇ? ಎನ್ನುವುದನ್ನು ಪರಿಸರ ಇಲಾಖೆ ನಿರ್ಧರಿಸುತ್ತದೆ. ಆದರೆ ಯಾವುದೇ ಹಂತದಲ್ಲೂ ಯೋಜನೆಗೆ ನಮ್ಮಿಂದ ಸಂಪೂರ್ಣ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಸರಕಾರದ ಅನುಮತಿ ದೊರಕಿಲ್ಲ: ರೈ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಬಿ. ರಮಾನಾಥ ರೈ ಮಾತನಾಡಿ, ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರ ಯೋಜನೆಗೆ ಈವರೆಗೆ ಸರಕಾರದ ಅನುಮತಿ ದೊರಕಿಲ್ಲ. ಈ ವಿಷಯವನ್ನು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿಸಿದ್ದು, ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿರೋಧವಿದ್ದರೆ ಬೇರೆಡೆಗೆ ಸ್ಥಳಾಂತರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು ಎಂದರು.

ಯಾವುದೇ ಯೋಜನೆಗಳು ಅನುಷ್ಠಾನಕ್ಕೆ ಬರಬೇಕಿದ್ದರೂ ಅದಕ್ಕೆ ಪರಿಸರ ಇಲಾಖೆಯ ಅನುಮತಿ ಅತ್ಯವಶ್ಯವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರದ ಪರಿಸರ ಇಲಾಖೆಯಿಂದ ಅಗತ್ಯವಾಗಿ ಜಂಟಿ ಅನುಮೋದನೆ ದೊರಕಬೇಕಿದೆ. ಈ ನಿಟ್ಟಿನಲ್ಲಿ ಕೇಂದ್ರ ಪರಿಸರ ಇಲಾಖೆಗೂ ಇಲ್ಲಿನ ಪರಿಸ್ಥಿತಿಯ ಬಗ್ಗೆ ಸಂಪೂರ್ಣವಾಗಿ ವಿವರಿಸಲಾಗಿದೆ ಎಂದರು.

ಈ ಹಿಂದೆ ಕರಾವಳಿಯಲ್ಲಿ ಹಲವಾರು ಯೋಜನೆಗಳು ಅನುಷ್ಠಾನದ ಹಂತಕ್ಕೆ ಬಂದು ಹಿಂದೆ ಹೋಗಿವೆ. ಮಂಗಳೂರಿನಲ್ಲಿ ಎಂಆರ್‌ಪಿಎಲ್ ಯೋಜನೆ ಪ್ರಾರಂಭಕ್ಕೆ ಮುನ್ನ ಹಲವಾರು ರೀತಿಯ ವಿರೋಧ ನಡೆಯಿತು. ಆದರೂ ಯೋಜನೆ ಅನುಷ್ಠಾನಕ್ಕೆ ಬಂತು. ಇದರಿಂದ ಜನರಿಗೇನೂ ತೊಂದರೆಯಾಗಿಲ್ಲ, ಅದೇ ರೀತಿಯಲ್ಲಿ ಕೊಜೆಂಟ್ರಿಕ್ಸ್ ಯೋಜನೆ ಅನುಷ್ಠಾನದ ಹಂತಕ್ಕೆ ಬಂದರೂ ಇದರಿಂದಾಗಿ ಪರಿಸರಕ್ಕೆ ಹಾನಿಯಿದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಈ ಯೋಜನೆಗೆ ಕರಾವಳಿಯಲ್ಲಿ ಸ್ಥಳಾವಕಾಶ ದೊರಕಿಲ್ಲ ಎನ್ನುವುದನ್ನೂ ನಾವು ಅರಿತುಕೊಳ್ಳುವುದು ಅವಶ್ಯ ಎಂದರು.

ನಾವೆಲ್ಲರೂ ಒಂದಾಗಿದ್ದೇವೆ: ಸೊರಕೆ

ನಿಡ್ಡೋಡಿ ಯೋಜನೆಯ ಬಗ್ಗೆ ಯಾರೂ ಸಂಶಯ ಪಡಬೇಕಾಗಿಲ್ಲ, ನಾವೆಲ್ಲರೂ ಯೋಜನೆಯ ವಿರುದ್ಧವಾಗಿದ್ದೇವೆ. ರಾಜ್ಯ ಸಂಪುಟದಲ್ಲಿರುವ ಕರಾವಳಿಯ ನಾಲ್ವರು ಸಚಿವರು ಮತ್ತು ಕೇಂದ್ರ ಸಂಪುಟದಲ್ಲಿರುವ ಇಬ್ಬರು ಸಚಿವರೂ ಜತೆಗೂಡಿ ಈ ಯೋಜನೆಯನ್ನು ವಿರೋಧಿಸುತ್ತೇವೆ ಎಂದು ನಗರಾಭಿವೃದ್ಧಿ ಮತ್ತು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಮಾರ್ ಸೊರಕೆ ಹೇಳಿದರು.

ನವೀನ್‌ಚಂದ್ರ ಜೆ. ಶೆಟ್ಟಿ ಪಡುಬಿದ್ರಿ, ಕಾಪು ದಿವಾಕರ ಶೆಟ್ಟಿ, ನವೀನ್ ಎನ್. ಶೆಟ್ಟಿ, ಅಬ್ದುಲ್ ಅಜೀಜ್, ಲೀಲಾಧರ ಜಿ. ಶೆಟ್ಟಿ ಉಪಸ್ಥಿತರಿದ್ದರು.

6th Happy Birthday
VISHRUTH
Best Wishes : Baby Poojarthi, Somanath K. Poojary, Babitha S. Poojary, Master Gyan, "Chethas", Kadekar

6ನೇ ಹುಟ್ಟುಹಬ್ಬ
ವಿಶ್ರುತ್, ಕಡೇಕಾರ್
ಶುಭಕೋರುವ:

5ನೇ ಹುಟ್ಟುಹಬ್ಬದ ಶುಭಾಶಯಗಳು
ಪ್ರಮಿತ್ ಶೆಟ್ಟಿ
ಶುಭಕೋರುವ:

ಪ್ರಥಮ ಹುಟ್ಟುಹಬ್ಬದ ಶುಭಾಶಯಗಳು
ವೈಶಾಂಕ್
ಶುಭಕೋರುವ:

1ನೇ ಹುಟ್ಟುಹಬ್ಬದ ಶುಭಾಶಯಗಳು
ನವನೀತ್
ವಾಸುದೇವ ಆಚಾರ್ಯ

6 Happy Birthday
Vishruth.S.Poojary
Wishes From:

ಅಭಿನಂದನೆಗಳು
ವೇ|ಮೂ| ಮಿತ್ತೂರು ರಾಮಕೃಷ್ಣ ಭಟ್
ಕೊಡೂರು ರಾಮಚಂದ್ರ ಭಟ್
OSHIMA






For Civil / Architectural Professionals
- AutoCAD
- 3D Studio MAX
- STAAD Pro
- MS Project
- Primavera
- Revit

CADD CENTRE
M.G.Road, (Mlr) : 2493692
UDUPI : 4295515

ಶ್ರೀಕೃಷ್ಣ ಮಠ, ಪರ್ಯಾಯ
ಶ್ರೀ ಸೋದೆ ವಾದಿರಾಜ ಮಠ, ಉಡುಪಿ
ದಿನಾಂಕ : 8-8-2013
ಬೆಳಿಗ್ಗೆ 10.30ಕ್ಕೆ ಮಹಾಪೂಜೆ. ಸಂಜೆ 5.00ಕ್ಕೆ ಪುರಾಣ ಪ್ರವಚನ.
ಪ್ರವಚನಕಾರರು : ಡಾ| ಉದಯಕುಮಾರ್ ಸರಳತ್ತಾಯ.
ವಿಷಯ : ಪದ್ಮ ಪುರಾಣ. ಸಂಜೆ 6.00ಕ್ಕೆ ರಾಜಾಂಗಣದಲ್ಲಿ ನಿರಂತರ ಜ್ಞಾನಯಜ್ಞ
ವಿಷಯ: ಭೂಗೋಳ ವರ್ಣನೆ. ಪ್ರವಚನಕಾರರು : ಶ್ರೀ ಪ್ರದೋಷ ಆಚಾರ್ಯ
ರಾತ್ರಿ 7.00ಕ್ಕೆ ರಾಧಾಕೃಷ್ಣ ನೃತ್ಯನಿಕೇತನ, ಉಡುಪಿ ಆಚರಿಸುವ 'ಚೆಣ್ಣರ ಉತ್ಸವ'.
ರಾತ್ರಿ 7.15ಕ್ಕೆ ರಾತ್ರಿ ಪೂಜೆ
ಸಂಜೆ 6.30ಕ್ಕೆ ಮಧ್ವಮಂಟಪದಲ್ಲಿ ಶ್ರೀಶದಾಸರಿಂದ ಹರಿಕಥಾ ಕಾರ್ಯಕ್ರಮ
ತಾ. 9-8-2013ರಂದು ಶ್ರಾವಣ ಶುಕ್ರವಾರದ ಪ್ರಯುಕ್ತ ವಿಪ್ರ ಮಹಿಳೆಯರಿಂದ
ಶ್ರೀ ಲಕ್ಷ್ಮೀ ಶೋಭಾನೆ ಪಠಣ